**ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ**

ಸಿ ಸಿ ನಂಬರ 208/2018

| ಸಿಡಬ್ಲ್ಯೂ | 12 | ಪಿಡಬ್ಲ್ಯೂ | 7 |
|---|---|---|---|

ಸಾಕ್ಷಿದಾರರ ಹೆಸರು : ಪಿ ಎಸ್ ತಿಪ್ಪೇಸ್ವಾಮಿ

ತಂದೆಯ ಹೆಸರು : ಶ್ಯಾಮಣ್ಣ

ವಯಸ್ಸು : 55 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 10.06.2026

ಉದ್ಯೋಗ : ಎ ಎಸ್ ಐ

ವಾಸ ಸ್ಥಳ : ಹೊನ್ನಳ್ಳಿ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

2016 ರಿಂದ 2018 ರವರೆಗೆ ಮುಖ್ಯ ಪೇದೆ ಅಂತಾ ಚಿಗಟೇರಿ ಪೋಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 17.06.2018 ರಂದು ಮಧ್ಯಾಹ್ನ 3 ಗಂಟೆ ಚಾ ಸಾ 1 ರವರು ನೀಡಿದ ದೂರನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನೆ ನಂಬರ 54/2018 ರಂತೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಪ್ರಥಮ ವರ್ತಮಾನ ವರದಿ ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದೂರನ್ನು ನಿ ಪಿ 1 ಎಂದು ಗುರುತಿಸಲಾಗಿದೆ, ಸಾಕ್ಷಿ ಸಹಿಯನ್ನು ನಿ ಪಿ 1(ಬಿ) ಎಂದು ಗುರುತಿಸಲಾಯಿತು. ಸದರಿ ಪ್ರಥಮ ವರ್ತಮಾನ ವರದಿಯನ್ನು ನಿ ಪಿ7 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು. ಮರು ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾ ಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಕೃತ್ಯ ಸ್ಥಳದ ಪಂಚನಾಮೆ ಜರೂಗಿಸಿ ಮುದ್ದೆ ಮಾಲನ್ನು ಠಾಣಾ ಮಾಲುಪಟ್ಟಿಗೆ ಅಳವಡಿಸಿರುತ್ತೇನೆ. ಪಂಚನಾಮೆ ನಿ ಪಿ 2 ಎಂದು ಗುರುತಿಸಲಾಗಿದೆ, ಸಾಕ್ಷಿ ಸಹಿಯನ್ನು ನಿ ಪಿ 2(ಬಿ) ಎಂದು ಗುರುತಿಸಲಾಯಿತು. ಚಾ ಸಾ 1 ರವರ 164 ಹೇಳಿಕೆಯನ್ನು ಪಡೆದುಕೊಳ್ಳಲು ನ್ಯಾಯಾಲಯಕ್ಕೆ ವಿನಂತಿ ಸಲ್ಲಿಸಿರುತ್ತೇನೆ. ಚಾ ಸಾ 6 ರಿಂದ 10 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೆನೆ. ನಿರೀಕ್ಷಣಾ ಜಾಮೀನು ಪಡೆದು ಆರೋಪಿತರು ಹಾಜರಾಗಿದ್ದು ಅವರನ್ನು

ಸಿ ಸಿ ನಂಬರ 208/2018

| | | | |
|---|---|---|---|
| ಸಿಡಬ್ಲ್ಯೂ | 12 | ಪಿಡಬ್ಲ್ಯೂ | 7 |

ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಗೊಳಿಸಿರುತ್ತೇನೆ. ಚಾ ಸಾ 4 ರಿಂದ 6 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. 16.08.2018 ರಂದು ತನಿಖೆ ಪೂರ್ಣಗೊಳಿಸಿ ದೋಷರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ಚಾ ಸಾ 1, 6 ಮತ್ತು 7 ರವರ ಗಾಯದ ಪ್ರಮಾಣ ಪತ್ರಗಳನ್ನು ನಿ ಪಿ 3 ರಿಂದ ನಿ ಪಿ 6 ಎಂದು ಗುರುತಿಸಲಾಗಿದೆ. ಸಾಕ್ಷಿ ಸಹಿಗಳನ್ನು ನಿ ಪಿ 3(ಬಿ), ನಿ ಪಿ 4(ಬಿ), ನಿ ಪಿ 5(ಬಿ) ನಿ ಪಿ 6(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ ಜಿ ಬಿ ವಕೀಲರಿಂದಃ-**

ದೂರುದಾರರು ನನಗೆ ಯಾವುದೇ ದೂರು ಕೊಟ್ಟಿರುವುದಿಲ್ಲಾ ಎಂದರೆ ಸರಿಯಲ್ಲ. ನಾನು ಚಾ ಸಾ 6 ರಿಂದ 10 ರವರ ಹೇಳಿಕೆ ಪಡೆದುಕೊಂಡಿರುವುದಿಲ್ಲಾ ಎಂದರೆ ಸರಿಯಲ್ಲ. ಪಂಚರಿಗೆ ನೋಟೀಸು ಕೊಟ್ಟಿರುತ್ತೇನೆ. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನೋಟೀಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಪೋಲೀಸ ಠಾಣೆ ಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಸಿ ಡಿ ಹಾಜರುಪಡಿಸಿರುತ್ತೇನೆ. ಪೋಟೋಗಳನ್ನು ಮುದ್ದೆ ಮಾಲು ಕಾಣಿಸುವುದಿಲ್ಲಾ ಎಂದರೆ ಸರಿ. ಪೋಟೋ ವನ್ನು ನಿ ಡಿ 1 ಎಂದು ಗುರುತಿಸಲಾಯಿತು. ಅಂಕೆ ಸಂಖ್ಯೆಗೋಸ್ಕರ ಘಟನಾ ಸ್ಥಳದಲ್ಲಿ ಪೋಟೋ ತೆಗೆದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಬೆಳಿಗ್ಗೆ 8 ಗಂಟೆಗೆ ಕೂಡ ದೂರು ಕೊಟ್ಟಿದ್ದರು ಎಂದರೆ ಸರಿ. ಆಗ ನಾನು ಠಾಣಾಧಿಕಾರಿ ಆಗಿರಲಿಲ್ಲ. ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ 3 ಮತ್ತು ನಿ ಪಿ 4

ಸಿ ಸಿ ನಂಬರ 208/2018

| | | | |
|---|---|---|---|
| ಸಿಡಬ್ಲ್ಯೂ | 12 | ಪಿಡಬ್ಲ್ಯೂ | 7 |

ಗಾಯದ ಪ್ರಮಾಣ ಪತ್ರದಲ್ಲಿ 8.30 ಗಂಟೆಗೆ ಘಟನೆ ಆದ ಬಗ್ಗೆ ನಮೂದು ಇದೆ ಎಂದರೆ ಸರಿ. ನಿ ಪಿ 5 ಗಾಯದ ಪ್ರಮಾಣ ಪತ್ರದಲ್ಲಿ 8.00 ಗಂಟೆಗೆ ಘಟನೆ ಆದ ಬಗ್ಗೆ ನಮೂದು ಇದೆ ಎಂದರೆ ಸರಿ. ಗಾಯದ ಪ್ರಮಾಣ ಪತ್ರಗಳನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ 3 ಸ್ಥಳದಲ್ಲಿ ವಶಪಡಿಸಿಕೊಂಡಿರುತ್ತೇನೆ. ಮು ಮಾ 3 ಕುಪ್ಪಸ ಸ್ಥಳದಲ್ಲಿ ಬಿದ್ದಿತ್ತು. ಮು ಮಾ 3 ಕುಪ್ಪಸ ಸ್ಥಳದಲ್ಲಿ ಬಿದ್ದಿತ್ತು ಅಂತಾ ಈಗ ಹೊಸದಾಗಿ ಹೇಳುತ್ತಿದ್ದೇನೆ ಎಂದರೆ ನೆನಪಿಲ್ಲ. ಕಲಂ 354 ಹೆಚ್ಚುವರಿಯಾಗಿ ಸೇರಿಸುವ ಉದ್ದೇಶ ದಿಂದ ಪೋಲೀಸ ಠಾಣೆಗೆ ತಂದು ಕೊಟ್ಟ ಕುಪ್ಪಸವನ್ನು ವಶಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ:-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.